**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ದೇವದುರ್ಗ.**

**CC No.619/2023**

**CW - 6 PW-7**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಸಮೀರ |
| ತಂದೆ | ಃ | ಶಾಲಂ |
| ವಯಸ್ಸು | ಃ | 22 |
| ಉದ್ಯೋಗ | ಃ | ಮೆಕಾನಿಕ್ |
| ವಾಸಸ್ಥಳ | ಃ | ಜಿ.ಹನುಮಪೂರು |
| ಪ್ರಮಾಣಿಕರಿಸಿದ ದಿನಾಂಕ | ಃ | **26-03-2026** |

---

**ಮುಖ್ಯ ವಿಚಾರಣೆ:- ಮಾನ್ಯ ಸ.ಸ.ಅ ರವರಿಂದ**

ದಿನಾಂಕ **24-04-2022** ರಂದು ಬೆಳಿಗ್ಗೆ **11:00** ಗಂಟೆಗೆ ಅಕ್ಬರ ಸಾಬ ನನ್ನ ಚಿಕ್ಕಪ್ಪನಿಗೆ ಫೋನ್ ಮಾಡಿ ನಿಮ್ಮ ಚಿಕ್ಕಮ್ಮನವರ ಕಡೆಯಿಂದ ಕುಂಟೆ ಜನರು ಬಂದಿರುತ್ತಾರೆ ಎಂದು ಫೋನ್ ಮಾಡಿದ್ದರು ಆಗ ನಾನು, ಶಂಶುದ್ದೀನ್, ಶಾಲಂ, ಶಾಹೀದ್ ಮತ್ತು ಸಮೀರ ಹೋಗಿರುತ್ತೇವೆ. ಆಗ ಶಂಶುದ್ದೀನ್ ಕುಳಿತು ಮಾತನಾಡೋಣ ಎಂದು ಆರೋಪಿತರಿಗೆ ಹೇಳಿದಾಗ ನನ್ನ ಚಿಕ್ಕಮ್ಮಳ ತಂದೆ ಮಾತನಾಡುವುದು ಏನು ಇದೆ ಎಂದು ಚಾಸಾ-**1** ರವರ ಜೊತೆ ಜಗಳ ತೆಗೆದು ಅಲ್ಲಿಯೇ ಇದ್ದ ಕಟ್ಟಿಗೆಯಿಂದ ಚಾಸಾ-**1** ರವರ ತಲೆಗೆ ನನ್ನ ಚಿಕ್ಕಮ್ಮಳ ತಂದೆ ಹೊಡೆದಾಗ ರಕ್ತಗಾಯವಾಗಿರುತ್ತದೆ. ನಂತರ ನನ್ನ ಚಿಕ್ಕಮ್ಮಳ ತಮ್ಮ ಕಲ್ಲಿನಿಂದ ಚಾಸಾ-**1** ರವರ ಮೂಗಿಗೆ ಹೊಡೆದು ರಕ್ತಗಾಯ ಮಾಡಿರುತ್ತಾನೆ. ಆಗ ಚಾಸಾ-**1** ಕೆಳಗೆ ಬಿದ್ದಿದ್ದು ಆಗ ಅವರಿಗೆ ಎಲ್ಲ ಆರೋಪಿತರು ಕಾಲಿನಿಂದ ಒದ್ದು ಇನ್ನೊಂದು ಸಲ ಜಮೀನಿಗೆ ಬಂದರೆ ಜೀವ ಸಹಿತ ಬಿಡುವುದಿಲ್ಲ ಅಂತ ಜೀವದ ಬೆದರಿಕೆ ಹಾಕಿರುತ್ತಾರೆ. ಆ ಕುರಿತು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ಕೆಲವು ಆರೋಪಿತರು ನ್ಯಾಯಾಲಯದಲ್ಲಿ ಇರುವುದಿಲ್ಲ ಎಂದು ನುಡಿದಿರುತ್ತಾರೆ. ಆರೋಪಿ ಪರ ವಕೀಲರು ಗೈರು ಹಾಜರು ಇದ್ದ ಆರೋಪಿತರ ಗುರುತಿನ ಬಗ್ಗೆ ತಕರಾರು ಇಲ್ಲವೆಂದು ಹೇಳಿರುತ್ತಾರೆ.

**ಪಾಟೀ ಸವಾಲು:- ಆರೋಪಿತರ ಪರ ಶ್ರೀ. ಎಸ್.ಪಿ ವಕೀಲರಿಂದ.**

ನನಗೆ ಓದಲು ಬರೆಯಲು ಬರುವುದಿಲ್ಲ. ಸದರಿ ಜಮೀನನ್ನು ಅಕ್ಬರ ಲೀಜಿಗೆ ಪಡೆದುಕೊಂಡು ಸಾಗುವಳಿ ಮಾಡುತ್ತಿದ್ದಾನೆ ಎಂದರೆ ಸರಿ. ಅಕ್ಬರ ಚಾಸಾ-1 ರವರಿಂದ 2 ಎಕರೆ

ಜಮೀನನ್ನು ಖರೀದಿ ಮಾಡಿರುತ್ತಾನೆ ಎಂದರೆ ಸರಿ. ಚಾಸಾ-1 ಆಗಾಗ ಸಾರಾಯಿ ಸೇವನೆ ಮಾಡುತ್ತಾನೆ ಎಂದರೆ ಸರಿಯಲ್ಲ. ನನ್ನ ತಾಯಿ ಮತ್ತು ಚಾಸಾ-1 ಕೊಡಾಲ್ ಗ್ರಾಮದಲ್ಲಿ ವಾಸವಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ನನ್ನ ಚಿಕ್ಕಮ್ಮ ಕೊಡಾಲ್ ಗ್ರಾಮದಲ್ಲಿ ವಾಸವಿರುತ್ತಾಳೆ ಎಂದರೆ ಸರಿ. ಚಾಸಾ-1 ರವರಿಗೆ 8 ನೇ ಆರೋಪಿ ಫಾತೀಮಾ ಮೂಲಕ 3 ಜನ ಮಕ್ಕಳು ಜನಿಸಿರುತ್ತಾರೆ ಎಂದರೆ ಸರಿ. ಸದರಿ 3 ಜನ ಮಕ್ಕಳು ತಾಯಿ ಜೊತೆ ಕ್ವಾಡಾಲ ಗ್ರಾಮದಲ್ಲಿ ವಾಸವಿರುತ್ತಾಳೆ ಎಂದರೆ ಸರಿ. ಲೀಜಿನ ಹಣವನ್ನು ಚಾಸಾ-1 ಫಾತೀಮಾಗೆ ಕೊಡುತ್ತಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಲೀಜಿನ ಹಣವನ್ನು ಚಾಸಾ-1 ಪಡೆದುಕೊಳ್ಳುತ್ತಾನೆ ಎಂದರೆ ಸರಿ.

ನಾನು ಘಟನ ಸ್ಥಳಕ್ಕೆ ಹೋದಾಗ ಚಾಲಕ, ನನ್ನ ಚಿಕ್ಕಮ್ಮ ಮತ್ತು ನ್ಯಾಯಾಲಯದ ಮುಂದೆ ಇರುವ ಇಬ್ಬರು ಆರೋಪಿತರು ಇದ್ದರು ಉಳಿದ ಜನರು ಬದುವಿಗೆ ಕುಳಿತಿದ್ದರು. ಅವರ ಹೆಸರು ಹೇಳಲು ಬರುವುದಿಲ್ಲ. ನಮ್ಮನ್ನು ಮತ್ತು ಆರೋಪಿತರನ್ನು ಹೊರತು ಪಡಿಸಿ ಸ್ಥಳದಲ್ಲಿ ಹಿರೇರಾಯಕುಂಪಿ ಜನರು ಇದ್ದರು ಅವರ ಹೆಸರು ನನಗೆ ಗೊತ್ತಿಲ್ಲ. ಸಾಕಷ್ಟು ಜನರು ಸೇರಿ ಹೊಡೆಯುತ್ತಿರುವಾಗ ಯಾರು ದೇಹದ ಯಾವ ಭಾಗಕ್ಕೆ ಹೊಡೆದಿರುತ್ತಾರೆ ಎಂದು ಹೇಳಲು ಬರುವುದಿಲ್ಲ ಎಂದರೆ ಸರಿ. ಚಾಸಾ-1 ರವರ ಎಲ್ಲ ಆಸ್ತಿಯನ್ನು ನಾವೇ ಅನುಭವಿಸುತ್ತಿದ್ದೇವೆ ಎಂದರೆ ಸರಿ. ಯಾವುದೇ ಘಟನೆ ಆಗದೇ ಇದ್ದರು ಚಾಸಾ-1 ನನ್ನ ಚಿಕ್ಕಪ್ಪನಾಗಿದ್ದರಿಂದ ಆತನಿಗೆ ಸಹಾಯ ಮಾಡಲು ಘಟನೆ ಆಗಿರುತ್ತದೆ. ನನ್ನ ಚಿಕ್ಕಮ್ಮಳ ತಂದೆ ಚಾಸಾ-1 ರವರಿಗೆ ಕಟ್ಟಿಗೆಯಿಂದ ತಲೆಗೆ ಹೊಡೆದು ರಕಗಾಯ ಮಾಡಿರುತ್ತಾನೆ, ನನ್ನ ಚಿಕ್ಕಮ್ಮಳ ತಮ್ಮ ಕಲ್ಲಿನಿಂದ ಚಾಸಾ-1 ರವರ ಮೂಗಿಗೆ ಹೊಡೆದು ರಕ್ತ ಗಾಯ ಮಾಡಿ ಕೆಳಗೆ ಕೆಡವಿ ಎಲ್ಲರೂ ಒದ್ದಿರುತ್ತಾರೆ ಮತ್ತು ಜೀವದ ಬೆದರಿಕೆ ಹಾಕಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲಿಸರು ನನ್ನ ಹೇಳಿಕೆ ಪಡೆದಿರುವುದಿಲ್ಲ.

**ಮರುವಿಚಾರಣೆ:- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ದೇವದುರ್ಗ.**

**CC No.619/2023**

**CW - 2 PW-6**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಅಲಂ ಘನಿ |
| ತಂದೆ | ಃ | ಖಾಜ ಮೊಹಿನುದ್ದೀನ್ |
| ವಯಸ್ಸು | ಃ | 32 |
| ಉದ್ಯೋಗ | ಃ | ರಿಪೋಟರ್ |
| ವಾಸಸ್ಥಳ | ಃ | ಗಬ್ಬೂರು |
| ಪ್ರಮಾಣಿಕರಿಸಿದ ದಿನಾಂಕ | ಃ | **26-03-2026** |

---

**ಮುಖ್ಯ ವಿಚಾರಣೆ:- ಮಾನ್ಯ ಸ.ಸ.ಅ ರವರಿಂದ**

ದಿನಾಂಕ **04-03-2022** ರಂದು ಬೆಳಿಗ್ಗೆ **11:00** ಗಂಟೆಗೆ ಹಿರೇರಾಯಕುಂಪಿಯ ಸ.ನಂ.**163** ರಲ್ಲಿ ಪೋಲಿಸರು ಪಂಚನಾಮೆ ಮಾಡಿ ಒಂದು ಕಟ್ಟಿಗೆ ಮತ್ತು ಕಲ್ಲನ್ನು ಜಪ್ತಿ ಮಾಡಿಕೊಂಡಿರುತ್ತಾರೆ. ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ**-2** ಎಂದು ಗುರುತಿಸಿದ್ದು ಸಹಿಯನ್ನು ನಿಪಿ**-2** ಬಿ ಎಂದು ಗುರುತಿಸಲಾಯಿತು.

**ಪಾಟೀ ಸವಾಲು:- ಆರೋಪಿತರ ಪರ ಶ್ರೀ. ಎಸ್.ಪಿ ವಕೀಲರಿಂದ.**

ನಾನು ನನ್ನ ಮನೆಯಲ್ಲಿ ಇದ್ದಾಗ ಪೋಲಿಸರು ನನ್ನನ್ನು ಪಂಚನಾಮೆಗೆ ಕರೆದುಕೊಂಡು ಹೋಗಿರುತ್ತಾರೆ. ಪಿ.ಎಸ್.ಐ ಇವರು ಫೋನ್ ಮೂಲಕ ನನಗೆ ತಿಳಿಸಿರುತ್ತಾರೆ. ಪಂಚನಾಮೆಗೆ ನಾನು ಚಾಸಾ-1 ಮತ್ತು 3 ಹಾಗೂ ಪೋಲಿಸರು ಹೋಗಿದ್ದೇವು. ಪಂಚನಾಮೆ ಮಾಡಿದ ಜಮೀನು ಸ.ನಂ. ಹಿರೇರಾಯಕುಂಪಿ ಸೀಮೆಯಲ್ಲಿನ ಸ.ನಂ.163 ಆಗಿರುತ್ತದೆ. ಘಟನ ಸ್ಥಳದ ಚಕ್ಕಂದಿ ಹೇಳಲು ಬರುವುದಿಲ್ಲ. ಪಂಚನಾಮೆ ಕಾಲಕ್ಕೆ ಜಮೀನಿನಲ್ಲಿ ಯಾವುದೇ ಬೇಳೆ ಇರಲಿಲ್ಲ. ಹಿರೇರಾಯಕುಂಪಿ ಗ್ರಾಮದಿಂದ ಸದರಿ ಜಮೀನು ಅಂದಾಜು 2 ಕಿ.ಮೀ ಅಂತರ ಇರುತ್ತದೆ. ಮೇಲೆ ಹೇಳಿದ ಜನರನ್ನು ಹೊರತು ಪಡಿಸಿ ಪಂಚನಾಮೆ ಕಾಲಕ್ಕೆ ಬೇರೆ ಯಾರು ಇರಲಿಲ್ಲ. ಸದರಿ ಕಲ್ಲು ಹಿಡಿ ಗಾತ್ರದ ಕಲ್ಲು ಆಗಿತ್ತು. ಅಮಾನತ್ತು ಪಡಿಸಿಕೊಂಡ ಕಲ್ಲುಗಳು ಎಲ್ಲ ಕಡೆ ಸಿಗುತ್ತವೆ ಎಂದರೆ ಸರಿ. ನಾನು ಪತ್ರಕರ್ತನಾಗಿರುತ್ತೇನೆ ಎಂದರೆ ಸರಿ. ಚಾಸಾ-1 ನನ್ನ ಸಂಬಂಧಿಕರು ಎಂದರೆ ಸಾಕ್ಷಿ ದೂರು ಸಂಬಂಧಿಕರು ಎಂದು ನುಡಿಯುತ್ತಾರೆ. ನಾನು ಈಗ ರಾಯಚೂರಿನಲ್ಲಿ ವಾಸವಿರುತ್ತೇನೆ ಎಂದರೆ ಸರಿ. ಚಾಸಾ-1 ನನ್ನ ಸಂಬಂಧಿಕನು ಆಗಿದ್ದರಿಂದ

ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡದೇ ಇದ್ದರು ಚಾಸಾ-1 ರವರಿಗೆ ಸಹಾಯವಾಗಲು ನನ್ನ ಸಮಕ್ಷಮ ಪೋಲಿಸರು ಪಂಚನಾಮೆ ಮಾಡಿ ಕಲ್ಲು ಮತ್ತು ಬಡಿಗೆಯನ್ನು ಜಪ್ತಿ ಮಾಡಿಕೊಂಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಪಂಚನಾಮೆಗೆ ನಾನು 2-3 ಸಹಿ ಮಾಡಿರುತ್ತೇನೆ. ಪಂಚನಾಮೆಯಲ್ಲಿ ಬರೆದ ಸಂಗತಿಗಳು ನನಗೆ ಗೊತ್ತಿಲ್ಲ ಎಂದರೆ ಸರಿ.

**ಮರುವಿಚಾರಣೆ:- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.